## ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ/ವಿಎಸ್‌ಸಿ/283/2023

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 16.10.2023

### ಸುತ್ತೋಲೆ

ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 13.10.2023 ರಂದು ಗೃಹ ಕಛೇರಿ "ಕೃಷ್ಣಾ" ದಲ್ಲಿ ನಡೆದ ಪ್ರಸಕ್ತ ವಿದ್ಯುತ್ ಪರಿಸ್ಥಿತಿಯ ಪರಿಶೀಲನಾ ಸಭೆಯಲ್ಲಿ ವಿದ್ಯುತ್ ಸರಬರಾಜನ್ನು ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ ಈ ಕೆಳಗಿನ ನಿರ್ದೇಶನಗಳನ್ನು ನೀಡಲಾಗಿದೆ.

1. ಹಾಲಿಯಿರುವ ವಿದ್ಯುತ್ ಪರಿಸ್ಥಿತಿಯಲ್ಲಿ ಕೃಷಿ ಫೀಡರ್‌ಗಳಿಗೆ ದಿನವಹಿ 5 ಗಂಟೆಗಳ ವಿದ್ಯುತ್ತನ್ನು ಪೂರೈಸುವುದು (ವಿದ್ಯುತ್ ಹೊರೆಗನುಗುಣವಾಗಿ ಹಗಲು ಮತ್ತು ರಾತ್ರಿಯ ಬ್ಯಾಚ್‌ಗಳಲ್ಲಿ).
2. ವಿಶ್ವಾಸಾರ್ಹ ಮತ್ತು ನಿರಂತರ ವಿದ್ಯುತ್ ಪೂರೈಕೆಯನ್ನು ನಿರ್ವಹಿಸಲು ಕೆಪಿಟಿಸಿಎಲ್ ವತಿಯಿಂದ ಪ್ರತಿ ಜಿಲ್ಲೆಗೆ ಒಬ್ಬ ಮುಖ್ಯ ಇಂಜಿನಿಯರ್‌ನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದ್ದು, ಈಗಾಗಲೇ ನೀಡಲಾಗಿರುವ ಜವಾಬ್ದಾರಿಗಳನ್ವಯ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳುವುದು.
3. ವಿಸಕಂಗಳಲ್ಲಿ ವಿಜಿಲೆನ್ಸ್ ತಂಡವನ್ನು ಹೆಚ್ಚು ಸಕ್ರಿಯವಾಗಿರಿಸಿ ವಿದ್ಯುತ್ ಕಳ್ಳತನ/ ಸೋರಿಕೆಯಾಗದಂತೆ ಕ್ರಮವಹಿಸುವುದು.
4. ನೋಡಲ್ ಅಧಿಕಾರಿಗಳು ಹಾಗೂ ಸಂಬಂಧಿತ ಕ್ಷೇತ್ರ ಅಧಿಕಾರಿಗಳು ರೈತರಿಗೆ ಮತ್ತು ಧರಣಿ ನಿರತರೊಂದಿಗೆ ಸಂಪರ್ಕದಲ್ಲಿದ್ದು ವಿದ್ಯುತ್ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸುವುದು.

ಮೇಲಿನ ಕ್ರಮಗಳ ಅನುಷ್ಠಾನ ಮತ್ತು ಜಿಲ್ಲಾಮಟ್ಟದ ವಿದ್ಯುತ್ ಪೂರೈಕೆ ಮೇಲ್ವಿಚಾರಣೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದು. ವಿಸಕಂ ಗಳು ಸದ್ಯದ ವಿದ್ಯುತ್ ಪರಿಸ್ಥಿತಿ ನಿರ್ವಹಣೆ ಕುರಿತು ಸಮಿತಿಯ ಸಲಹೆ ಪಡೆಯುವುದು.

ವಿದ್ಯುತ್ ಸರಬರಾಜು ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ವಿತರಣೆಯ ಮೇಲ್ವಿಚಾರಣೆಗೆ ಸಂಪೂರ್ಣ ಜವಾಬ್ದಾರರಾಗಿದ್ದು, ನೋಡಲ್ ಅಧಿಕಾರಿಗಳು ನಿಯಮಾನುಸಾರ ಕ್ರಮವಹಿಸುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಈ ಕಾರ್ಯದಲ್ಲಿ ಯಾವುದೇ ಅಧಿಕಾರಿಯು ನಿರ್ಲಕ್ಷತೆ ತೋರಿದಲ್ಲಿ ಅವರ ಮೇಲೆ ಕಠಿಣ ಕ್ರಮ ಜರುಗಿಸುವುದು.

(ವಿನೋದ್ ಕುಮಾರ್ .ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕೆಪಿಸಿಎಲ್/ ಕೆಪಿಟಿಸಿಎಲ್/ ಬೆಸ್ಕಾಂ/ ಸೆಸ್ಕ್/ ಮೆಸ್ಕಾಂ/ ಹೆಸ್ಕಾಂ/ ಜೆಸ್ಕಾಂ/ಕ್ರೆಡಲ್/ ಪಿಸಿಕೆಎಲ್/ ಹು.ಗ್ರಾ.ವಿ.ಸ.ಸಂ

2. ನಿರ್ದೇಶಕರು (ಪ್ರಸರಣ), ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.
3. ನಿರ್ದೇಶಕರು (ತಾಂತ್ರಿಕ), ಕೆಪಿಸಿಎಲ್/ ಬೆಸ್ಕಾಂ/ ಸೆಸ್ಕ್/ ಮೆಸ್ಕಾಂ/ ಹೆಸ್ಕಾಂ/ ಜೆಸ್ಕಾಂ
4. ನಿರ್ದೇಶಕರು (ತಾಂತ್ರಿಕ)/ (ಆರ್ಥಿಕ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಮುಖ್ಯ ಇಂಜಿನಿಯರ್ (ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಬೆಂಗಳೂರು.
6. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಆಪ್ತ ಕಾರ್ಯದರ್ಶಿಗಳು, ಕೆಪಿಟಿಸಿಎಲ್ ಮತ್ತು ಎಲ್ಲಾ ವಿಸಕಂಗಳ ವ್ಯವಸ್ಥಾಪಕ ನಿರ್ದೇಶಕರು - ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸುತ್ತೋಲೆಯನ್ನು ರವಾನಿಸುವುದು.
9. ಅಪರ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಕಛೇರಿ ಪ್ರತಿ

**ಮೆಮೋ**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ/ಸಪ್ರವ್ಯ(ಡಿಸಿಸಿ)/23-24/** C45-978 **ದಿನಾಂಕ :** 19 OCT 2023

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಎನರ್ಜಿ ವಿಎಸ್‌ಸಿ /283/2023 ದಿನಾಂಕ: 16-10-2023 ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು:**

1. ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು/ಹಾಸನ
3. ಅಧೀಕ್ಷಕ ಇಂಜಿನಿಯರ್(ವಿ) ಕಾಮಗಾರಿ ಮತ್ತು ನಿರ್ವಹಣೆ ವೃತ್ತ, ಕವಿಪ್ರನಿನಿ, ಮೈಸೂರು/ಹಾಸನ
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.
6. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಉಪವಿಭಾಗ, ಚಾವಿಸನಿನಿ.
7. ಕಾರ್ಯನಿರ್ವಾಹಕ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
8. ಉಪ ಪ್ರಧಾನ ವ್ಯವಸ್ಥಾಪಕರು, ಎಂಐಎಸ್, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಮತ್ತು ನಿಗಮದ ಜಾಲತಾಣದಲ್ಲಿ ಪ್ರಕಟಿಸಲು.
9. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಡಿ.ಸಿ.ಸಿ/ ಸಿಸಿಸಿಡಿ, ಚಾ.ವಿ.ಸ.ನಿ.ನಿ, ಮೈಸೂರು.
10. ಸಹಾಯಕ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು(APRO), ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
11. ಎಲ್ಲಾ ಶಾಖಾಧಿಕಾರಿಗಳು, ಕಾ ಮತ್ತು ಪಾ ಶಾಖೆ, ಚಾವಿಸನಿನಿ ರವರ ಸೂಕ್ತ ಕ್ರಮಕ್ಕಾಗಿ.
12. ಆಪ್ತ ಸಹಾಯಕರು ವ್ಯ.ನಿ ಇದನ್ನು ಮಾನ್ಯ ವ್ಯ.ನಿ ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.
13. ತಾಂ.ಸ, ನಿ(ತಾಂ) ಇದನ್ನು ಮಾನ್ಯ ವ್ಯ.ನಿ./ನಿ(ತಾಂ) ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.

ಕಛೇರಿ ಪ್ರತಿ/ಮುಖ್ಯ ಕಡತ

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು